ಜೀವನವೇನೋ ಸಾಗುತ್ತಿತ್ತು. ಆದರೆ ಗೋಪಾಲನ ಈ ಚಾಳಿಯಿಂದಾಗಿ ಎಲ್ಲರ ನೆಮ್ಮದಿ ದೂರಾಗಿ, ದಿನನಿತ್ಯ ವಾಗ್ವಾದ, ಜಗಳ ಸಾಮಾನ್ಯವಾಗಿಬಿಟ್ಟಿತ್ತು. ಈ ಸಮಸ್ಯೆ ತಾರಕಕ್ಕೇರಿದ್ದು ಆತ ತನಗಿದ್ದ ಇಬ್ಬರು ಹೆಣ್ಣುಮಕ್ಕಳ ಮೇಲೂ ಸಂಶಯದ ದೃಷ್ಟಿ ಬೀರಿದಾಗ. 'ತಾಯಿ ಹಾಂಗೆ ಮಗಳು, ನೂಲಿನಾಂಗೆ ಸೀರೆ. ನಿನ್ ಮಕ್ಕಳೂ ನಿನ್ನಷ್ಟೇ ಶುಭಗರು' ಎಂದು ಗೋಪಾಲ ಹೀಯಾಳಿಸಿದಾಗ, ತನ್ನೆಲ್ಲಾ ಸಂಯಮವನ್ನೂ ಕಳೆದುಕೊಂಡ ಗಂಗಕ್ಕ 'ನಿನ್ ಹುಲಿ ಹಿಡಿಯ' ಎಂದು ಗಂಡನನ್ನು ಶಪಿಸಿದ್ದು ಹೌದು. ಅದಾದ ಕೆಲವೇ ದಿನಗಳಲ್ಲಿ ಆತ ಕಾಣೆಯಾಗಿದ್ದೂ ಹೌದು. ಆತ ಕಾಣೆಯಾಗುವಾಗ ಸಕ್ರೆಬೈಲು ಸೊಸೈಟಿಯಿಂದ ಐವತ್ತು ಸಾವಿರ ಸಾಲ ತೆಗೆದಿದ್ದೂ ಸತ್ಯ. ಒಟ್ಟಿಗೇ ಬೆಳೆಯುತ್ತಿದ್ದ ಆ ಸಾಲದ ಬಡ್ಡಿಯನ್ನೂ ಮತ್ತು ಸಂಸಾರದ ಖರ್ಚನ್ನೂ ತೂಗಿಸಲು ಆಕೆ ಹೆಣಗಾಡಿದ್ದು ಅಷ್ಟಿಷ್ಟಲ್ಲ.

ಹೆಣ್ಣು ಮಕ್ಕಳಿಬ್ಬರನ್ನೂ ಘಟ್ಟದ ಕೆಳಗಿನ ಯಾವ್ಯಾವುದೋ ಊರುಗಳಿಗೆ ಮದುವೆ ಮಾಡಿ ಕೊಟ್ಟಿದ್ದಳು ಗಂಗಕ್ಕ. ಅವರ ಗಂಡನ ಮನೆಯವರು ಶ್ರೀಮಂತರೇ ಆದರೂ ವಿನಯ, ಸೌಜನ್ಯದ ಐಸಿರಿ ಅವರಲ್ಲಿ ಇರಲಿಲ್ಲ. ಹಾಗಾಗಿ ಬೀಗರ ಕಡೆಯವರಿಗೆಲ್ಲಾ ಗಂಗಕ್ಕನ ಬಗ್ಗೆ ಒಂಥರಾ ತಾತ್ಸಾರ. ಜೊತೆಗೆ ಈಕೆಯ ಇಬ್ಬರು ಮಕ್ಕಳಲ್ಲೇ ತಾಯಿಯ ಬಗ್ಗೆ ಉದಾಸೀನ; ತಮ್ಮತಮ್ಮಲ್ಲೇ ಸಂಪತ್ತಿನ

